ರಾಜ್ಯದಲ್ಲಿ ಹೊಸ ಗ್ರಂಥಾಲಯಗಳ ಮಂಜೂರಾತಿ

೨೯೧ (೮೨೮) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಎಷ್ಟು ಹೊಸ ಮಂಡಲ ಗ್ರಂಥಾಲಯಗಳು ಮಂಜೂರಾಗಿದೆ.

ಆ) ಎಷ್ಟು ಜಿಲ್ಲೆಗಳಲ್ಲಿ, ಎಷ್ಟೆಷ್ಟು ಮಂಡಲ ಗ್ರಂಥಾಲಯಗಳನ್ನು ತೆರೆಯಲಾಗಿದೆ.

ಇ) ಅದಕ್ಕೆ ಸಾಕಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆಯೇ ?

ಶ್ರೀ ಪ್ರಭಾಕರ್ ಎಸ್. ರಾಣೆ. (ವಯಸ್ಕರ ಶಿಕ್ಷಣ ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು).—

ಅ) ೧೯೫೩-೯೪ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು ೩೦೦ ಮಂಡಲ ಗ್ರಂಥಾಲಯಗಳು ಮಂಜೂರಾಗಿವೆ. ಪಟ್ಟಿ ಲಗತ್ತಿಸಿದೆ.

ಆ) ೧೯೫೩-೯೪ನೇ ಸಾಲಿನಲ್ಲಿ ಪ್ರಾರಂಭಿಸಲಾದ ಒಟ್ಟು ಗ್ರಂಥಾಲಯಗಳ ಸಂಖ್ಯೆ: ೨೭೬ ಪಟ್ಟಿ ಲಗತ್ತಿಸಿದೆ.

ಇ) ಹೌದು.

೧೯೫೩-೯೪ನೇ ಸಾಲಿನಲ್ಲಿ ಜಿಲ್ಲೆಗಳಿಗೆ ಮಂಜೂರಾದ ಪಂಚಾಯ್ತಿ ಗ್ರಂಥಾಲಯಗಳ ಸಂಖ್ಯೆಗಳ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಮಂಜೂರಾದ ಗ್ರಂಥಾಲಯಗಳ ಸಂಖ್ಯೆ	ಷರಾ
೧.	ಮಂಗಳೂರು	೧೮	
೨.	ಹಾಸನ	೯	
೩.	ಚಿತ್ರದುರ್ಗ	೧೬	
೪.	ಬೆಳಗಾಂ	೨೭	
೫.	ರಾಯಚೂರು	೧೧	
೬.	ಕಾರವಾರ	೫೯	
೭.	ಬಿಜಾಪುರ	೧೯	
೮.	ಧಾರವಾಡ	೨೨	
೯.	ಗುಲ್ಬರ್ಗ	೧೬	
೧೦.	ಬೀದರ್	೯	
೧೧.	ಮೈಸೂರು	೧೦	
೧೨.	ಬೆಂಗಳೂರು (ಗ್ರಾಮಾಂತರ)	೧೧	
೧೩.	ಮಡಿಕೇರಿ	೬	
೧೪.	ಬಳ್ಳಾರಿ	೧೦	
೧೫.	ಕೋಲಾರ	೧೫	
೧೬.	ತುಮಕೂರು	೧೬	
೧೭.	ಚಿಕ್ಕಮಗಳೂರು	೯	
೧೮.	ಮಂಡ್ಯ	೧೦	
೧೯.	ಶಿವಮೊಗ್ಗ	೧೫	
೨೦.	ಬೆಂಗಳೂರು (ನಗರ)	೧೧	
	ಒಟ್ಟು	೩೦೦	

೧೯೯೩-೯೪ನೇ ಸಾಲಿನಲ್ಲಿ ವಿವಿಧ ಜಿಲ್ಲೆಗಳಲ್ಲಿ ಪ್ರಾರಂಭಿಸಲಾದ ಪಂಚಾಯ್ತಿ ಗ್ರಂಥಾಲಯಗಳ ಸಂಖ್ಯೆ

ಕ್ರ. ಸಂ.	ಜಿಲ್ಲೆಯ ಹೆಸರು	ಪ್ರಾರಂಭಿಸಲಾದ ಗ್ರಂಥಾಲಯಗಳ ಸಂಖ್ಯೆ	ಷರಾ
೨.	ಮಂಗಳೂರು	೧೦	
೨.	ಹಾಸನ	೯	
೩,	ಚಿತ್ರದುರ್ಗ	೧೫	
೪.	ಬೆಳಗಾಂ	೨೩	
೫.	ರಾಯಚೂರು	೧೧	
೬.	ಬಿಜಾಪುರ	೧೭	
೭.	ಧಾರವಾಡ	೨೨	
೮.	ಗುಲ್ಬರ್ಗ	೯	
೯.	ಬೀದರ್	೯	
೧೦.	ಮೈಸೂರು	೧೦	
೧೧.	ಬೆಂಗಳೂರು (ಗ್ರಾಮಾಂತರ)	೧೧	
೧೨.	ಮಡಿಕೇರಿ	೬	
೧೩.	ಬಳ್ಳಾರಿ	೧೦	
೧೪.	ಕೋಲಾರ	೧೫	
೧೫.	ತುಮಕೂರು	೧೭	
೧೬.	ಚಿಕ್ಕಮಗಳೂರು	೯	
೧೭.	ಮಂಡ್ಯ	೧೦	
೧೮.	ಶಿವಮೊಗ್ಗ	೧೩	
೧೯.	ಬೆಂಗಳೂರು (ನಗರ)	೧೧	
೨೦.	ಕಾರವಾರ	೩೯	
	ಒಟ್ಟು	೨೭೬	

ಶ್ರೀ ಕೆ. ಸೋಮಪ್ಪ ಸುವರ್ಣ. —ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನಗೆ ಒದಗಿಸಿರುವ ಉತ್ತರದಲ್ಲಿ ನಮ್ಮ ರಾಜ್ಯದಲ್ಲಿ ೩೦೦ ಗ್ರಂಥಾಲಯಗಳನ್ನು ಈಬಾರಿ ತೆರೆದಿದೆ ಎಂದು ಸುಚಿಸಿದ್ದಾರೆ. ಈ ವರ್ಷ ಮುಂಚೆಗಿಂತ ಹೆಚ್ಚು ಗ್ರಂಥಾಲಯಗಳನ್ನು ತೆರೆದಿದ್ದೀರಿ ಸಂತೋಷವಾಯಿತು. ಹಾಗಿದ್ದರೂ ಸಹ ಈ ಗ್ರಂಥಾಲಯಗಳನ್ನು ತೆರೆಯುವಾಗ ಆಯಾಯ ಜಿಲ್ಲೆಯ ಸಾಕ್ಷರತೆಯ ಪ್ರಮಾಣವನ್ನು ಆನುಸರಿಸಿ ಎಲ್ಲಿ ವಿದ್ಯಾಭ್ಯಾಸ ಪಡೆದ ಜನರು ಹೆಚ್ಚು ಇದ್ದಾರೆ ಎಲ್ಲಿ ಆವಶ್ಯಕತೆ ಇದೆಯೋ ಅಲ್ಲಿಗೆ ಆದ್ಯತೆ ಮೇಲೆ ಕೂಡಬೇಕು. ಇದಕ್ಕೊಂದು ನಾರ್ಮ್ಸ್ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಕೆಲವು ಜಿಲ್ಲೆಗಳಿಗೆ ೪೦ ರಷ್ಟು ಗ್ರಂಥಾಲಯಗಳನ್ನು ಸಣ್ಣ ಜಿಲ್ಲೆಗೆ ಕೊಟ್ಟಿದ್ದೀರಿ, ದೊಡ್ಡ ಜಿಲ್ಲೆಗೆ ೯-೧೦ ಬಂದಿದ್ದು ಉಂಟು. ಯಾವ ರೀತಿ ಆಸ್ಪತ್ರೆ ಕೊಡಲಿಕ್ಕೆ ಒಂದು ನಾರ್ಮ್ಸ್ ಆನ್ನು ಆನುಸರಿಸುತ್ತೇವೆ ಗೋವಿನ ಆಸ್ಪತ್ರೆಯನ್ನು ಕೊಡಲಿಕ್ಕೆ ಯಾವರೀತಿ ನಾರ್ಮ್ಸ್ ಆನ್ನು ಆನುಸರಿಸುತ್ತೇವೆ ಅದೇ ಪ್ರಕಾರ ಗ್ರಂಥಾಲಯವನ್ನು ತೆರೆಯುವಾಗ ಒಂದು ನಾರ್ಮ್ಸ್ ಆನ್ನು ಆನುಸರಿಸಿ ಯಾವ ಕ್ಷೇತ್ರಕ್ಕೂ ಆನ್ಯಾಯವಾಗದ ರೀತಿಯಲ್ಲಿ ಇನ್ನು ಮುಂದೆ ಗ್ರಂಥಾಲಯಗಳನ್ನು ಕೊಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಎಚ್ಚರಿಕೆ ವಹಿಸಬೇಕೆಂದು ತಿಳಿಸಬಯಸುತ್ತೇನೆ.

ಶ್ರೀ ಪಿ. ಎಸ್. ರಾಣೆ.—ಒಂದು ಸಂಗತಿಯನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಕಳೆದ ವರ್ಷದವರೆಗೆ ೫೩೧ ಗ್ರಾಮೀಣ ಗ್ರಂಥಾಲಯಗಳು ಮಾತ್ರ ಇತ್ತು. ಕಳೆದ ೧ ವರ್ಷದಲ್ಲಿ ೩೦೦ ಗ್ರಂಥಾಲಯಗಳನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಸಾಕ್ಷರತೆಯ ಪ್ರಮಾಣವನ್ನು ಅನುಸರಿಸಿ ಎಲ್ಲಿ ಹೆಚ್ಚು ಇದೆ ಅಲ್ಲಿ ಗ್ರಂಥಾಲಯಗಳನ್ನು ಹೆಚ್ಚು ಕೊಡಬೇಕೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ತಾತ್ವಿಕವಾಗಿ ಒಪ್ಪುತ್ತೇನೆ. ಆದರೆ ಇದೇ ಕಾಲಕ್ಕೆ ಗ್ರಂಥಾಲಯಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ನಾವು ಇಲ್ಲಿ ಈ ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ ಮಾಡುತ್ತಿರುವಾಗ ಯಾವ ಗ್ರಾಮಗಳಲ್ಲಿ ಸ್ಥಳೀಯ ಸಂಸ್ಥೆಗಳು ಕಟ್ಟಡಗಳನ್ನು ಪೂರೈಸಲಿಕ್ಕೆ ಮುಂದೆ ಬರುತ್ತವೋ ಅಂತಹವರಿಗೆ ಪ್ರಾಸಶ್ತ್ಯವನ್ನು ಕೊಡುತ್ತಿದ್ದೇವೆ. ಈ ಗ್ರಂಥಾಲಯಗಳನ್ನು ಪ್ರಾರಂಭ ಮಾಡುವಾಗ ನಾವು ಈ ಗ್ರಂಥಾಲಯಗಳಿಗೆ ಕಟ್ಟಡವನ್ನು ಒದಗಿಸಿ ಕೊಡುವಂತಹ ಯೋಜನೆ ನಮ್ಮಲ್ಲಿ ಇಲ್ಲ. ನಾವು ಅಲ್ಲಿಗೆ ಪುಸ್ತಕಗಳನ್ನು ಒದಗಿಸುವುದು ಗ್ರಂಥಗಳನ್ನು ಒದಗಿಸುವುದು, ವರ್ತಮಾನ ಪತ್ರಿಕೆಗಳನ್ನು ಒದಗಿಸುವುದು ಮತ್ತು ಅವುಗಳನ್ನು ನೋಡಲಿಕ್ಕೆ ಮೇಲ್ವಿಚಾರಕರನ್ನು ನೇಮಿಸುವಂಥಾದ್ದು ಇದೆ. ಇಂತಹ ಸಂದರ್ಭ ಇರುವಾಗ ಎಲ್ಲಿ ಕಟ್ಟಡ ಗಳನ್ನು ಒದಗಿಸಲಿಕ್ಕೆ ಮುಂದೆ ಬಂದಿದ್ದಾರೋ ಆ ರೀತಿ ನಾವು ಕೊಟ್ಟಿದ್ದೇವೆ. ಇನ್ನೊಬ್ಬ ಶಾಸಕರು ನಾವು ಕಟ್ಟಡ ಕೊಡುತ್ತೇವೆಂದು ಹೇಳಿದ್ದಾರೆ. ನಾನು ನಾಳೆಯೇ ಪ್ರಾರಂಭ ಮಾಡೋಣವೆಂದು ಹೇಳಿದ್ದೇನೆ. ಮಾನ್ಯ ಸೋಮಪ್ಪ ಸುವರ್ಣ ಅವರೂ ಕೂಡ ತಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ಕಟ್ಟಡಗಳನ್ನು ಒದಗಿಸಲಿಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಪಟ್ಟಿ ಕೊಟ್ಟರೆ ಅದನ್ನು ಈ ವರ್ಷದಲ್ಲಿ ಅಂದರೆ ೯೪–೯೫ ರಲ್ಲಿ ಅಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿ ಕಾಲರಾ ರ್‍ಯಾಬೀಸ್ ತಡೆಗಟ್ಟುವ ಕ್ರಮಗಳು

೨೯೩ (೮೩೬) ಶ್ರೀ ಡಿ.ಕೆ. ಎಂ. ಪುಟ್ಟಿನ್ ಷಾ (ನಾಮ ನಿರ್ದೇಶನ ಹೊಂದಿದವರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬೇಸಿಗೆ ಕಾಲದಲ್ಲಿ ಕಾಲರಾ ಮತ್ತು ಹುಚ್ಚು ನಾಯಿ (ರ್‍ಯಾಬೀಸ್) ಪ್ರಕರಣಗಳ ಸಂಖ್ಯೆಯು ವರದಿಯಾಗಿ ಚಿಕಿತ್ಸೆ ನೀಡಲಾಗಿದೆ? (ಇದರ ವಿಚಾರವನ್ನು ನಗರ ಮತ್ತು ಗ್ರಾಮಾಂತರ ಪ್ರದೇಶ ಬೇರೆ ಬೇರೆ ಕೊಡುವುದು)

ಹ : ಹರಡಿದ್ದು

ಮ : ಮರಣ

ಆ) ಸರ್ಕಾರ ಬೇಸಿಗೆ ಕಾಲದಲ್ಲಿ ನಿಯಂತ್ರಣ ಕ್ರಮ ತೆಗೆದುಕೊಂಡ ಬಗ್ಗೆ?

ಇ) ಇದಕ್ಕಾಗಿ ಒದಗಿಸಿದ ಹಣ? (ನಗರ ಮತ್ತು ಗ್ರಾಮಾಂತರ, ಪ್ರದೇಶವಾರು ಮತ್ತು ವಾರ್ಷಿಕವಾರು)

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಎ) ಕಳೆದ ಮೂರು ವರ್ಷಗಳ ಬೇಸಿಗೆ ಕಾಲದಲ್ಲಿ ವರದಿಯಾದ ಕಾಲರಾ ಮತ್ತು ರ್‍ಯಾಬೀಸ್ ಪ್ರಕರಣಗಳ ವಿವರ ಹೀಗಿದೆ :

ವರ್ಷ	ವರದಿಯಾದ ಕಾಲರಾ ಪ್ರಕರಣಗಳು			
	ನಗರ		ಗ್ರಾಮಾಂತರ	
	ಹ.	ಮ.	ಹ.	ಮ.
೧೯೯೧	೭೭	೨	೨೩೮	೩
೧೯೯೨	೨೫	೨	೨೦೨	೬
೧೯೯೩	೨೧	೨	೧೮೭	೫